# ಪರಮಾತ್ಮನೆಂಬ ಪರಮಾಪ್ತ ಸಖ

ಶಶಿಕಲಾ ಶ್ರೀಧರ್

ಭಕ್ತಿಮಾರ್ಗದಲ್ಲಿ 'ಸಖ್ಯ ಭಕ್ತಿ' ಎಂಬ ವಿಧಾನವು ಅನೇಕ ಮಂದಿ ಸಾಧಕರ ಆಧ್ಯಾತ್ಮಿಕ ಜೀವನವನ್ನು ರೂಪಿಸಿದೆ. ಶ್ರೀರಾಮ, ಶ್ರೀಕೃಷ್ಣ ಮುಂತಾದ ಅವತಾರಪುರುಷರ ಜೀವನದ ಅವಧಿಯಲ್ಲೂ ಇಂತಹ ಭಕ್ತರಿದ್ದರು ಎಂಬುದಾಗಿ ತಿಳಿದುಬರುತ್ತದೆ. ಈ ಕುರಿತು ವಿವರಿಸಿರುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು.

ಇಲ್ಲೊಂದು ಕಥೆ : ಅದೊಂದು ಪುಟ್ಟ ಕುಟುಂಬ. ಇದರಲ್ಲಿ ಅಪ್ಪ ಅಮ್ಮ, ಒಂದು ಪುಟ್ಟ ಕಂದ. ಅಪ್ಪನ ಹುದ್ದೆಯ ಕಾರಣದಿಂದ ಹುಟ್ಟೂರಿನಿಂದ ಪಟ್ಟಣಕ್ಕೆ ಬಂದು ಇವರು ನೆಲೆಸಿದ್ದರು. ಪ್ರತಿವರ್ಷ ಕಂದ ನಂದನ ಶಾಲೆಯ ರಜಾದಿನಗಳಲ್ಲಿ ತಪ್ಪದೆ ಊರಿಗೆ ಹೋಗಿ ತಾಯಿತಂದೆಯರನ್ನು ಕಂಡು ಬರುವುದು ಈ ಕುಟುಂಬಕ್ಕೆ ಒಂದು ನಿಯಮವೇ ಆಗಿಬಿಟ್ಟಿತ್ತು. ಅಜ್ಜ ಅಜ್ಜಿಯ ಮನೆಯಲ್ಲಿ ಕುಣಿದು ಕುಪ್ಪಳಿಸಿ ನಲಿಯುತ್ತಿದ್ದ ನಂದ. ಅಪ್ಪ ಅಮ್ಮರನ್ನು ಕಂಡು ಸಂಭ್ರಮಿಸುತ್ತಿದ್ದರು ನಂದನ ತಾಯಿತಂದೆಯರು. ಹೀಗೆಯೇ ವರ್ಷಗಳು ಉರುಳಿ ನಂದ ಬೆಳೆದು ಚಿಕ್ಕ ಹುಡುಗನಾದ. ಆ ವರುಷದ ರಜಾದಿನಗಳಲ್ಲಿ ನಂದ ತನ್ನ ತಂದೆಯನ್ನು ಕುರಿತು, ತಾನು ಈಗ ಬೆಳೆದು ದೊಡ್ಡವನಾಗಿರುವನೆಂದು ಅಜ್ಜಿ ತಾತನ ಊರಿಗೆ ತಾನೊಬ್ಬನೇ ಹೋಗಿಬರುವುದಾಗಿ ಹೇಳಿ, ಅದಕ್ಕಾಗಿ ರೈಲಿನ ಟಿಕೀಟು ಖರೀದಿಸಲು ಕೇಳಿಕೊಂಡ. ಅದರಂತೆ ಅವನ ತಂದೆ ಟಿಕೀಟು ಖರೀದಿಸಿ ಅವನನ್ನು ರೈಲಿಗೆ ಹತ್ತಿಸಿ, ಸೀಟಿನಲ್ಲಿ ಕುಳ್ಳಿರಿಸಿ ಎಲ್ಲ ರೀತಿಯ ಎಚ್ಚರಿಕೆಯ ಮಾತುಗಳನ್ನು ಹೇಳಿದ. ರೈಲು ಹೊರಡುವ ಸಮಯವಾದಾಗ ತಂದೆ ಮಗನ ಕೈಗೆ ಒಂದು ಪತ್ರವನ್ನು ಲಕೋಟೆಯಲ್ಲಿಟ್ಟು ಕೊಟ್ಟು ಒಬ್ಬನೇ ಪ್ರಯಾಣ ಮಾಡುವಾಗ ಮಾರ್ಗದಲ್ಲಿ ಭಯವಾದರೆ ಆ ಪತ್ರವನ್ನು ಓದಲು ಹೇಳಿದ. ನಂದ ಬಹಳ ಧೈರ್ಯವಾಗಿಯೇ ಹೊರಟ. ರೈಲು ಹೊರಟಿತು. ನಂದ ಸುತ್ತ ಕಣ್ಣುಹಾಯಿಸಿದ. ಸಹಪ್ರಯಾಣಿಕರೆಲ್ಲರೂ ಅವರವರ ಕುಟುಂಬದೊಡನೆ ಬಂದಿದ್ದರು. ಒಂದೊಂದು ನಿಲ್ದಾಣದಲ್ಲೂ ಹೊಸ ಹೊಸ ಜನರು ಹತ್ತುತ್ತಿದ್ದರು. ಒಂದು ನಿಲ್ದಾಣದಲ್ಲಿ ಒಬ್ಬ ಭಯಾನಕ ಮುಖವುಳ್ಳ ವ್ಯಕ್ತಿಯೊಬ್ಬ ಹತ್ತಿ ನಂದನ ಸಮೀಪವೇ ಕುಳಿತುಕೊಂಡಾಗ, ತಾನು ಒಂಟಿಯಾಗಿ ಪ್ರಯಾಣ ಮಾಡುತ್ತಿರುವುದು ನೆನಪಾಗಿ ನಂದನಿಗೆ ಅತ್ಯಂತ ಭಯವುಂಟಾಗಿ ಕೈಕಾಲು ನಡುಗಲು ಪ್ರಾರಂಭವಾಯಿತು. ಕೂಡಲೇ ತಂದೆಯು ಭಯವಾದಾಗ ಓದು ಎಂದು ಹೇಳಿ ಕೊಟ್ಟಿದ್ದ ಪತ್ರದ ನೆನಪಾಗಿ ಜೇಬಿನಲ್ಲಿದ್ದ ಲಕೋಟೆಯನ್ನು ಬಿಚ್ಚಿ ಪತ್ರವನ್ನು ಓದತೊಡಗಿದ. ಅದರಲ್ಲಿ, ''ಕಂದ, ನೀನು ಒಬ್ಬನೇ ಪ್ರಯಾಣ ಮಾಡುತ್ತಿರುವೆ ಎಂದು ಹೆದರಬೇಕಾಗಿಲ್ಲ. ನೀನು ಕುಳಿತಿರುವ ರೈಲಿನ ಪಕ್ಕದ ಬೋಗಿಯಲ್ಲೇ ನಾನೂ ಬರುತ್ತಿರುವೆ. ನೀನು ನಿರ್ಭಯನಾಗಿರು, ನೀನು ಒಬ್ಬಂಟಿಗನಲ್ಲ. ನಾನೂ ನಿನ್ನೊಡನೆಯೇ ಪ್ರಯಾಣ ಮಾಡುತ್ತಿರುವೆ.'' ಎಂದು ಬರೆದಿತ್ತು. ಇದನ್ನು ಓದುತ್ತಲೇ ನಂದನ ಭಯವೆಲ್ಲಾ ಮಾಯವಾಗಿ ಮುಖದಲ್ಲಿ ಮುಗುಳ್ನಗೆ ಅರಳಿತು. ಮುಂದಿನ ಪಯಣ ಧೈರ್ಯವಾಗಿ ಸಾಗಿತು.

ಈ ಕಥೆ ಪುಟ್ಟದಾದರೂ ಸಂದೇಶ ಬಲು ದೊಡ್ಡದು. ಈ ಕಥೆಯಂತೆಯೇ ನಮ್ಮನ್ನು ಜೀವನದ ಪಯಣಕ್ಕೆ ಭಗವಂತ ಕಳಿಸಿದಾಗ ಅವನು ನಮಗೂ ಒಂದು ಪತ್ರ ಬರೆದು ಕೊಟ್ಟಿರುತ್ತಾನೆ. ಅದು ಹೀಗಿರುತ್ತದೆ : ''ನಿನ್ನ ಬಾಳಿನ ಪಯಣದಲ್ಲಿ ನೀನು ಏಕಾಂಗಿ ಪಯಣಿಗ ಎಂದು ಭಯಪಡಬೇಕಾಗಿಲ್ಲ, ನಾನು ಪ್ರತಿಕ್ಷಣವೂ, ಪ್ರತಿಸ್ಥಳದಲ್ಲೂ ನಿನ್ನೊಡನೆಯೇ ಇರುವ ನಿನ್ನ ಪರಮ ಸ್ನೇಹಿತ. ನಿನ್ನ ಬಾಳಿನ ಪೂರ್ತಿಯಾತ್ರೆಯನ್ನು ನಿನ್ನೊಡನೆಯೇ ನಾನೂ ಮಾಡುತ್ತೇನೆ. ನೀನು ಕೇವಲ ನನ್ನನ್ನು ಸ್ಮರಿಸುತ್ತಿರು. ಭಯವುಂಟಾದರೆ ಕೂಡಲೇ ನನ್ನನ್ನು ಕರೆ. ನಿನ್ನ ಪಕ್ಕದಲ್ಲೇ ಇರುವ ನಾನು ಒಡನೆಯೇ ಓಡಿಬರುತ್ತೇನೆ. ನಿನಗೆ ಪರಮಾಪ್ತನಾದ ಈ ಪರಮಸಖನಲ್ಲಿ ವಿಶ್ವಾಸವಿಡು. ಬಾಳಿನ ಕೊನೆಯುಸಿರಿರುವವರೆಗೂ ನನ್ನನ್ನು ಕರೆಯುತ್ತಲೇ ಇರು, ಎಲ್ಲವನ್ನೂ ನನಗೆ ಒಪ್ಪಿಸಿ ನಿಶ್ಚಿಂತನಾಗಿ ನಿರ್ಭೀತನಾಗಿ ಪ್ರಯಾಣ ಮಾಡು. ಬಂಧುಗಳು ಕೈಕೊಡಬಹುದು ಆದರೆ ನನ್ನ ಸಹಾಯ ಹಸ್ತ ನಿನಗೆ ಸದಾಕಾಲವೂ ಇರುತ್ತದೆ....(ಸಹಿ) ಭಗವಂತ.''

ಈ ಮೇಲಿನ ಕಥೆಯಂತೆ ಪರಮಾತ್ಮ ಸದಾಕಾಲವೂ ನಮ್ಮೊಡನೆಯೇ ಇರುತ್ತಾನೆ. ಆದರೆ ನಾವು ಅವನನ್ನು ಕರೆಯುತ್ತಿಲ್ಲ ಅಷ್ಟೇ. ''ಹೇ ಗೆಳೆಯ, ನಾನೊಬ್ಬನೇ ಪಯಣಗೈಯುತ್ತಿರುವೆ, ನನಗೆ ಭಯವಾಗುತ್ತಿದೆ. ಅಕ್ಕಪಕ್ಕದಲ್ಲಿ ರಕ್ಕಸರಂತಿರುವ ಜನರು ಪ್ರಯಾಣಿಸುತ್ತಿದ್ದಾರೆ. ನೀನು ಬಂದು ನನ್ನೊಡನೆ ಕುಳಿತರೆ ನೆಮ್ಮದಿಯ ನಿಲ್ದಾಣ ಸೇರುವವರೆಗೂ ಯಾವ ಭೀತಿಯೂ ಇರಲಾರದು'' ಎಂದು ಹೃದಯತುಂಬಿ ಕರೆದರೆ ಆ ಗೆಳೆಯ ಬಂದೇ ಬರುವನಂತೆ. ಆ ಪರಮ ಆಪ್ತ ಸಖನಿಗೂ ನಮ್ಮನ್ನು ಬಿಟ್ಟಿರಲು ಸಾಧ್ಯವಾಗುವುದಿಲ್ಲವಂತೆ !

ಪರಮಾತ್ಮ ನಮ್ಮ ಪರಮಸಖ ಎಂಬ ವಿಚಾರವೇ ಅತ್ಯಂತ ಸುಖಕರವಾಗಿದೆ. ನವವಿಧಭಕ್ತಿಯಲ್ಲಿ 'ಸಖ್ಯಭಕ್ತಿ' ಅತ್ಯಂತ ಸುಂದರ!

ಶ್ರೀಹರಿಯ ಮಹಿಮೆಯನ್ನು ತಿಳಿದು ಅವನೇ ಪರಮಾಪ್ತನೆಂದು ಅವನಲ್ಲಿ ಮಾಡುವ ಸ್ನೇಹವೇ ಭಕ್ತಿಯಂತೆ! ತನ್ನೊಳಗೂ, ಸಕಲ ಜೀವಕೋಟಿಗಳೊಳಗೂ ಎಲ್ಲೆಡೆಯೂ ಇರುವ ಚೈತನ್ಯವೇ ಪರಮಾತ್ಮನೆಂಬ ಯಥಾರ್ಥ ಜ್ಞಾನದೊಡನೆ ಮಾಡುವ ಸ್ನೇಹವೇ ಭಕ್ತಿಯಂತೆ!

**ಶ್ರೀರಾಮ-ಸುಗ್ರೀವರ ಸಖ್ಯ**

ತ್ರೇತಾಯುಗದಲ್ಲಿ ಶ್ರೀಮದ್ರಾಮಾಯಣದಲ್ಲಿ ಸಖ್ಯಭಕ್ತಿಗೆ ಸಿಗುವ ಜ್ವಲಂತ ಪ್ರಕರಣವೇ ಶ್ರೀರಾಮ-ಸುಗ್ರೀವರ ಸ್ನೇಹ. ಪ್ರಾಣಕ್ಕೆ ಪ್ರಾಣ ಕೊಡಲು ಸಿದ್ಧರಿದ್ದ ಇವರೀರ್ವರ ಸ್ನೇಹ ಕೇವಲ ಅಗ್ನಿಸಾಕ್ಷಿ ಮಾತ್ರವಲ್ಲ ಆತ್ಮಸಾಕ್ಷಿಯದಾಗಿತ್ತು ಎಂಬುದನ್ನು ನೋಡುತ್ತೇವೆ.

ಭಗವಂತ ಬಯಸುವುದು ನಿಜವಾದ ಸ್ನೇಹ. ಏಕನಿಷ್ಠೆಯ ಸ್ನೇಹ. ಪ್ರಭುವು ಗೆಳೆಯನ ಪ್ರೇಮಪಾಶದಿಂದ ಕಟ್ಟಲ್ಪಡುತ್ತಾನೆ.



ವಾಲಿಯಿಂದ ಸುಗ್ರೀವನಿಗಾದ ಅನ್ಯಾಯ ತನಗೇ ಆದ ಅನ್ಯಾಯವೆಂದು ಭಾವಿಸುತ್ತಾನೆ ಗೆಳೆಯ ರಾಮ. ವಾಲಿಯ ವಧೆ ಮಾಡಿ, ಸುಗ್ರೀವ ಕಳೆದುಕೊಂಡ ರಾಜ್ಯವನ್ನು ಪುನಃ ಗಳಿಸಿಕೊಟ್ಟು , ಸೀತಾನ್ವೇಷಣೆಗಾಗಿ ಸಹಾಯ ಕೋರಿದಾಗ ಶ್ರೀರಾಮನ ಕಾರ್ಯ ತನ್ನ ಪರಮಕರ್ತವ್ಯವೆಂದು ಅತ್ಯಂತ ಸ್ನೇಹದಿಂದ ಹನುಮಾದಿ ವೀರ ವಾನರರನ್ನು ನಾಲ್ಕು ದಿಕ್ಕುಗಳಿಗೂ ಕಳಿಸುತ್ತಾನೆ ಸಖ ಸುಗ್ರೀವ. ಸೀತೆಯು ರಾವಣನ ಸೆರೆಯಲ್ಲಿರುವ ಸಂಗತಿ ಹನುಮನಿಂದ ಸಿಗುತ್ತಲೇ ಶ್ರೀರಾಮನೊಡನೆ ವಾನರವೀರರು ಸಮುದ್ರಕ್ಕೆ ಸೇತುವೆ ನಿರ್ಮಿಸಿ ಲಂಕೆಯನ್ನು ತಲುಪುತ್ತಾರೆ.

ಶ್ರೀರಾಮ ಮತ್ತು ಸುಗ್ರೀವ ಎತ್ತರವಾಗಿದ್ದ ಸುವೇಲ ಪರ್ವತದ ಶಿಖರವನ್ನು ಹತ್ತಿ ಲಂಕಾಪುರದ ಗೋಪುರದ ತುದಿಯಲ್ಲಿ ಸಕಲ ರಾಜಮರ್ಯಾದೆಯೊಡನೆ ನಿಂತಿದ್ದ ರಾವಣನನ್ನು ನೋಡುತ್ತಾರೆ. ಸೀತೆಯನ್ನು ಅಪಹರಿಸಿದ ಆ ರಾಕ್ಷಸನನ್ನು ನೋಡುತ್ತಲೇ ಸುಗ್ರೀವನು ಕೋಪದಿಂದ ಕೆರಳಿ ಒಡನೆಯೇ ಲಂಕೆಯ ಶಿಖರಕ್ಕೆ ಹಾರಿ ರಾವಣನೊಡನೆ ದ್ವಂದ್ವಯುದ್ಧವನ್ನು ಆರಂಭಿಸುತ್ತಾನೆ. ಪರಾಕ್ರಮಿಗಳಾದ ಇಬ್ಬರೂ ಪರಸ್ಪರ ಗಾಯಗಳಾಗಿ ರಕ್ತಹರಿಯುತ್ತಿದ್ದರೂ ಯುದ್ಧವನ್ನು ನಿಲ್ಲಿಸುವುದಿಲ್ಲ. ಸುಗ್ರೀವನು ರಾವಣನನ್ನು ಪೂರ್ಣವಾಗಿ ಆಯಾಸಗೊಳಿಸಿ ಹಿಂದಿರುಗಿ ರಾಮನ ಬಳಿಗೆ ಬರುತ್ತಾನೆ.

ಇತ್ತ ಚಿಂತಿತನಾದ ಶ್ರೀರಾಮನು ಗಾಯಗೊಂಡಿದ್ದ ಸುಗ್ರೀವನನ್ನು ಆಲಿಂಗಿಸಿ, ಸಂತೈಸುತ್ತಾ, ''ಗೆಳೆಯ, ಇಂತಹ ಕ್ಲೇಶದಾಯಕವಾದ ಸಾಹಸವನ್ನು ಏಕೆ ಮಾಡಿದೆ? ನಿನಗೇನಾದರೂ ಸಂಭವಿಸಿದ್ದರೆ ಸೀತೆಯಿಂದ ನನಗೇನಾಗಬೇಕಿತ್ತು? ನನ್ನ ತಮ್ಮಂದಿರಿಂದಾಗಲೀ ಏನಾಗಬೇಕಿತ್ತು? ಕಡೆಗೆ ನನ್ನ ಶರೀರದಿಂದೇನಾಗಬೇಕಿತ್ತು?'' ಎಂದು ಕೇಳುತ್ತಾನೆ. ಪುನಃ, ''ಸಖ ಸುಗ್ರೀವ, ನೀನು ರಾವಣನೊಡನೆ ಯುದ್ಧಮಾಡಿ ಜೀವಸಹಿತ ಹಿಂದಿರುಗದಿದ್ದಿದ್ದರೆ ಆ ರಾವಣನನ್ನು ಸಂಹರಿಸಿ, ವಿಭೀಷಣನಿಗೆ ಪಟ್ಟಕಟ್ಟಿ, ಭರತನಿಗೆ ಅಯೋಧ್ಯೆಯನ್ನೊಪ್ಪಿಸಿ ನಾನು ದೇಹತ್ಯಾಗ ಮಾಡಲು ನಿಶ್ಚಯ ಮಾಡಿದ್ದೆ '' ಎನ್ನುತ್ತಾನೆ. ರಾಮನ ಈ ಸ್ನೇಹದ ಮಾತುಗಳನ್ನು ಕೇಳಿ ಸುಗ್ರೀವನಿಗೆ ಕಣ್ತುಂಬಿ ಬರುತ್ತದೆ, ಇಂತಹ ಪರಮ ಸ್ನೇಹಿತನನ್ನು ಪಡೆದ ತಾನೇ ಧನ್ಯ ಎಂದು ಭಾವಿಸುತ್ತಾನೆ.

ಅನಂತರ ಸುಗ್ರೀವ ತನ್ನ ಅಸಂಖ್ಯ ವಾನರಸೇನೆಯೊಂದಿಗೆ ಲಂಕೆಗೆ ಮುತ್ತಿಗೆ ಹಾಕಿ ರಾವಣವಧೆಗೆ ಶ್ರೀರಾಮನಿಗೆ ಸಹಾಯ ಮಾಡುತ್ತಾನೆ. ಇದು ಸರಳ ಕಾರ್ಯವಾಗಿರಲಿಲ್ಲ, ಮಹತ್ಸಾಧನೆಯಾಗಿತ್ತು. ಶ್ರೀರಾಮನ ಸ್ನೇಹ ಅವನಿಂದ ಈ ಎಲ್ಲ ಕಷ್ಟ ಕಾರ್ಯಗಳನ್ನು ಸುಲಭವಾಗಿ ಮಾಡಿಸಿತ್ತು. ರಾವಣವಧೆಯ ನಂತರವೂ ಇವರಿಬ್ಬರ ಸ್ನೇಹ ಮುಂದುವರಿಯುತ್ತದೆ. ಶ್ರೀರಾಮನಿಗೆ ಅಯೋಧ್ಯೆಯಲ್ಲಿ ನಡೆಯುವ ಪಟ್ಟಾಭಿಷೇಕ ಮಹೋತ್ಸವದಲ್ಲಿ ತನ್ನ ಪರಿವಾರದೊಂದಿಗೆ ಭಾಗವಹಿಸಲು ಸುಗ್ರೀವನಿಗೆ ಶ್ರೀರಾಮನಿಂದ ಆಹ್ವಾನ ಬರುತ್ತದೆ. ಶ್ರೀರಾಮನು ಸುಗ್ರೀವನನ್ನು ಭರತನಿಗೆ ಪರಿಚಯಿಸಿದಾಗ, ಶ್ರೀರಾಮನಿಗೆ ಅವನು ನೀಡಿದ ಅತ್ಯಮೋಘ ಸಹಾಯಹಸ್ತದ ಬಗ್ಗೆ ಹನುಮಂತನಿಂದ ಮೊದಲೇ ತಿಳಿದಿದ್ದ ಭರತನು ಸುಗ್ರೀವನನ್ನು ಆತ್ಮೀಯವಾಗಿ ಆಲಿಂಗಿಸಿಕೊಂಡು ಹೇಳುತ್ತಾನೆ:

**ತ್ವಮಸ್ಮಾಕಂ ಚತುರ್ಣಾಂ ವೈ ಭ್ರಾತಾ ಸುಗ್ರೀವ ಪಂಚಮಃ ।**
**ಸೌಹೃದಾಜ್ಜಾಯತೇ ಮಿತ್ರಮಪಕಾರೋಽರಿಲಕ್ಷಣಮ್ ॥**

*(ವಾಲ್ಮೀಕಿ ರಾಮಾಯಣ, ಯುದ್ಧಕಾಂಡ, ೧೨೭-೪೭)*

'ಸುಗ್ರೀವ, ನೀನು ನಮ್ಮ ನಾಲ್ವರಿಗೂ ಐದನೆಯ ಒಡಹುಟ್ಟಿದವನಾಗಿರುವೆ. ಏಕೆಂದರೆ ಸ್ನೇಹಪೂರ್ವಕವಾಗಿ ಉಪಕಾರ ಮಾಡುವುದರಿಂದ ಒಬ್ಬನು ಮಿತ್ರನಾಗುತ್ತಾನೆ, ಅಂತಹ ಮಿತ್ರನು ಭ್ರಾತೃಸಮಾನನು. ಅಪಕಾರ ಮಾಡುವುದು ಶತ್ರುವಿನ ಲಕ್ಷಣವಾಗಿದೆ.'

ಹೀಗೆ ಶ್ರೀರಾಮ-ಸುಗ್ರೀವರ ಸ್ನೇಹದ ಆಳ ಅಗಲ ಭರತನಿಗೂ ತಿಳಿದಿತ್ತು.

ಶ್ರೀರಾಮಾದಿಗಳು ಅಯೋಧ್ಯೆಗೆ ಬಂದಮೇಲೆ ರಾಮನು ಭರತನನ್ನು ಕುರಿತು ತನ್ನ ಸ್ನೇಹಿತರಾಜನಿಗೆ ಅನುಕೂಲಕರ ಬಿಡಾರದ ವ್ಯವಸ್ಥೆ ಮಾಡಲು ಹೇಳುತ್ತಾನೆ:

**ತಚ್ಚ ಮದ್ಭವನಂ ಶ್ರೇಷ್ಠಂ ಸಾಶೋಕವನಿಕಂ ಮಹತ್ ।**
**ಮುಕ್ತಾವೈಡೂರ್ಯ ಸಂಕೀರ್ಣಂ ಸುಗ್ರೀವಾಯ ನಿವೇದಯ ॥**

*(ವಾಲ್ಮೀಕಿ ರಾಮಾಯಣ, ಯುದ್ಧಕಾಂಡ, ೧೨೮-೪೫)*

'ಸೋದರ ಭರತ! ಅಶೋಕವೃಕ್ಷಗಳಿಂದ ಸುತ್ತುವರಿಯಲ್ಪಟ್ಟಿರುವ, ಮುತ್ತುಗಳಿಂದಲೂ ವೈಡೂರ್ಯಗಳಿಂದಲೂ ಝುಟಿತವಾಗಿರುವ ಶ್ರೇಷ್ಠವಾದ ನನ್ನ ಅರಮನೆಯನ್ನು ಸುಗ್ರೀವನಿಗೆ ಬಿಟ್ಟುಕೊಡು' ಎನ್ನುತ್ತಾನೆ. ಅದರಂತೆ ಭರತ ಸುಗ್ರೀವನನ್ನು ಕೈಹಿಡಿದುಕೊಂಡು ರಾಮನ ಅರಮನೆಗೆ ಕರೆದೊಯ್ಯುತ್ತಾನೆ.

ಸುಗ್ರೀವನು ರಾಮಪಟ್ಟಾಭಿಷೇಕಕ್ಕೆ ಅತ್ಯಗತ್ಯವಾಗಿರುವ, ೫೦೦ ನದಿಗಳಿಂದಲೂ ನಾಲ್ಕು ಸಮುದ್ರಗಳಿಂದಲೂ ಪವಿತ್ರ ಜಲವನ್ನು ವಾನರವೀರರನ್ನು ಕಳಿಸಿ ಅತಿ ಶೀಘ್ರದಲ್ಲಿ ತರಿಸುತ್ತಾನೆ.

ಪಟ್ಟಾಭಿಷೇಕ ಮಹೋತ್ಸವವಾಗುತ್ತಲೇ ಶ್ರೀರಾಮನು ತನ್ನ ಪ್ರಿಯಸಖ ಸುಗ್ರೀವನಿಗೆ ಸಕಲ ಸನ್ಮಾನಗಳನ್ನು ಮಾಡಿ, ಸೂರ್ಯನ ಕಿರಣಗಳಂತೆ ಥಳಥಳಿಸುತ್ತಿದ್ದ, ಅನರ್ಘ್ಯ ಮಣಿಗಳಿಂದ ಕೂಡಿದ ದಿವ್ಯ ಸುವರ್ಣಮಾಲೆಯನ್ನು ಉಡುಗೊರೆಯಾಗಿ ಕೊಟ್ಟು ಆದರಪೂರ್ವಕವಾಗಿ ಬೀಳ್ಕೊಡುತ್ತಾನೆ. ಆ ಸಖನಾದರೋ ಆನಂದಭರಿತನಾಗಿ ರಾಮನ ಸ್ನೇಹವನ್ನು ಹೃದಯದಲ್ಲಿ ತುಂಬಿಕೊಂಡು ತೆರಳುತ್ತಾನೆ.

'ರಾಮಚರಿತಮಾನಸ' ದಲ್ಲಿ ಸಂತ ತುಲಸೀದಾಸರು ಮಿತ್ರನಿಗೆ ಮಿತ್ರರ ಕುರಿತು ಎಂತಹ ಕರ್ತವ್ಯವಿರಬೇಕು ಎಂಬುದನ್ನು ಶ್ರೀರಾಮನು ತನ್ನ ಮಿತ್ರನಾದ ಸುಗ್ರೀವನ ಬಗ್ಗೆ,

**ಜೇ ನ ಮಿತ್ರ ದುಃಖಹೋಹಿ ದುಖಾರಿ**
**ತಿನ್ಹಹಿ ಬಿಲೋಕತ ಪಾತಕ ಭಾರಿ**
**ನಿಜ ದುಃಖ ಗಿರಿ ಸಮ ರಜಕರಿ ಜಾನಾ**
**ಮಿತ್ರಕ ದುಃಖ ರಜ ಮೇರು ಸಮಾನಾ ॥** ಎನ್ನುತ್ತಾನೆ.

*(ರಾಮಚರಿತಮಾನಸ, ಕಿಷ್ಕಿಂಧಾಕಾಂಡ, ೬-೧)*

'ಯಾವ ಜನರು ಮಿತ್ರನ ದುಃಖದಿಂದ ದುಃಖಿಗಳಾಗುವುದಿಲ್ಲವೋ ಅವರನ್ನು ನೋಡುವುದರಿಂದಲೇ ಭಾರಿ ಪಾಪ ತಟ್ಟುತ್ತದೆ. ಪರ್ವತಕ್ಕೆ ಸಮಾನವಾದ ತನ್ನ ದುಃಖವನ್ನು ಧೂಳಿನಂತೆ ಮತ್ತು ಧೂಳಿಗೆ ಸಮಾನವಾದ ಮಿತ್ರನ ದುಃಖವನ್ನು ಮೇರುಪರ್ವತದಂತೆ ತಿಳಿದುಕೊಳ್ಳಬೇಕು.'

## ಶ್ರೀಕೃಷ್ಣ-ಅರ್ಜುನರ ಸಖ್ಯ

ದ್ವಾಪರ ಯುಗದ ಶ್ರೀಕೃಷ್ಣ-ಅರ್ಜುನರ ಸಖ್ಯ ವಿಶ್ವವಿಖ್ಯಾತ! ಸಖ್ಯಭಕ್ತರಲ್ಲಿ ಅರ್ಜುನ ಅಗ್ರಗಣ್ಯ! ಶ್ರೀಕೃಷ್ಣನ ಬಗ್ಗೆ ಯಥಾರ್ಥ ಜ್ಞಾನವನ್ನು ಪಡೆದುಕೊಂಡು ಸ್ನೇಹ ಮಾಡಿದ ಅರ್ಜುನನ ರಥಕ್ಕೆ ತಾನೇ ಸಾರಥಿಯಾದ ಶ್ರೀಕೃಷ್ಣ. ಮಾತ್ರವಲ್ಲ ತನ್ನ ಆಪ್ತ ಸಖ ಅರ್ಜುನನ ವಿಷಾದವನ್ನು ಹೋಗಲಾಡಿಸಲು ಅವನಿಗೆ ದಿವ್ಯಚಕ್ಷುಗಳನ್ನು ಕರುಣಿಸಿ, ಹಿಂದೆ ಯಾರೂ ನೋಡಿರದ ತನ್ನ ವಿಶ್ವರೂಪವನ್ನೇ ತೋರಿಸಿ, ಅವನ ಕ್ಲೈಬ್ಯವನ್ನು ಪರಿಹರಿಸಿ, ಧರ್ಮಯುದ್ಧಕ್ಕೆ ಉತ್ಸಾಹವನ್ನು ತುಂಬುತ್ತಾನೆ. ಈ ಪರಮಮಿತ್ರನೊಡನೆ ನಡೆಸಿದ ಸಂಭಾಷಣೆಯೇ ನಮಗೆ ಅವನು ಕರುಣಿಸಿರುವ ಅಮರಗೀತೆ ಶ್ರೀಮದ್ಭಗವದ್ಗೀತೆ !



**ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ ।**
**ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥**

'ಉಪನಿಷತ್ತುಗಳು ಗೋವುಗಳಾದರೆ, ಹಾಲುಕರೆವವನೇ ಕೃಷ್ಣ, ಅರ್ಜುನನೇ ಕರು, ಮಹತ್ ಗೀತಾಮೃತವೇ ಹಾಲು. ಜ್ಞಾನಿಗಳು ಅದನ್ನು ಕುಡಿಯುವರು.'

ಈ ಗೀತಾಮೃತ ನಮಗೆ ದೊರೆಯಲು ಅರ್ಜುನನೆಂಬ ವತ್ಸನ ಅಗತ್ಯವಿತ್ತು. ಅರ್ಜುನನ ಸಖ್ಯಭಕ್ತಿಯನ್ನು ಭಗವಂತನೇ ಸ್ವತಃ ಘೋಷಿಸುತ್ತಾ **'ಭಕ್ತೋಽಸಿ ಮೇ ಸಖಾ ಚೇತಿ'**–'ನೀನು ನನ್ನ ಭಕ್ತ ಹಾಗೂ ಸಖನಾಗಿರುವೆ', **'ಇಷ್ಟೋಽಸಿ ಮೇ ದೃಢಮಿತಿ'** 'ನೀನು ನನಗೆ ಪರಮಪ್ರಿಯನಾಗಿರುವೆ' ಎನ್ನುತ್ತಾನೆ. ಗೀತೆಯ ವಿಭೂತಿಯೋಗದಲ್ಲಿ **'ಪಾಂಡವಾನಾಂ ಧನಂಜಯಃ'** ಪಾಂಡವರಲ್ಲಿ ನಾನು ಅರ್ಜುನ ಎನ್ನುತ್ತಾನೆ. ತನ್ನ ಪರಮಸ್ನೇಹಿತನಲ್ಲಿ ತನ್ನ ವಿಭೂತಿಯನ್ನೇ ಕಾಣುತ್ತಾನೆ ಈ ಪರಮಸಖ !

ನಿಜವಾದ ಸಖ ತನ್ನ ಆಪ್ತಮಿತ್ರನಿಗಾಗಿ ಎಲ್ಲವನ್ನೂ ಕೊಡಲು ಸಿದ್ಧನಾಗಿರುತ್ತಾನೆ. ಇಲ್ಲಿ ಪಾತ್ರ ಅಪಾತ್ರತೆಯ ಪ್ರಶ್ನೆಯೇ ಬಾರದು. ಶ್ರೀಕೃಷ್ಣ ತನ್ನ ಪ್ರಿಯಸಖ ಅರ್ಜುನನಿಗೆ ಬೇಕಾದ ಪಾತ್ರತೆಯನ್ನು ತಾನೇ ಕರುಣಿಸಿ, ತನ್ನ ವಿಶ್ವರೂಪವನ್ನು ಪ್ರಕಟಗೊಳಿಸುತ್ತಾನೆ. ಧನ್ಯನಾದ ಆ ಸಖ ಅರ್ಜುನ ಈ ಪರಮಾದ್ಭುತ ರೂಪವನ್ನು ದರ್ಶಿಸಿ, ಅವನ ಮುಂದೆ ತಾನೆಷ್ಟು ಅಲ್ಪನು ಎಂದು ಭಾವಿಸುತ್ತಾ ಕೃಷ್ಣನನ್ನು ಕುರಿತು, ''ಹೇ ದೇವ, ನಿನ್ನ ಮಹಿಮೆಯನ್ನರಿಯದೆ ನಿನ್ನೊಡನೆ ಅತ್ಯಂತ ಸ್ನೇಹದಿಂದಲೂ ಸಲಿಗೆಯಿಂದಲೂ ನಡೆದುಕೊಳ್ಳುತ್ತಾ ನಿನ್ನನ್ನು ಕೃಷ್ಣ, ಯಾದವ, ಸಖ ಎಂದೆಲ್ಲಾ ಕರೆಯುತ್ತಿದ್ದೆ. ನನ್ನನ್ನು ಕ್ಷಮಿಸು'' ಎಂದು ಪ್ರಾರ್ಥಿಸುತ್ತಾನೆ.

### ಶ್ರೀಕೃಷ್ಣ-ಗೋಪಿಯರು

ಸಖ್ಯಭಕ್ತಿಯ ಮತ್ತೊಂದು ಮುಖ್ಯ ಲಕ್ಷಣ ತನ್ನ ಸಖನ ಹಿತಕ್ಕಾಗಿ ತನ್ನ ಸೌಖ್ಯವನ್ನು ತ್ಯಜಿಸುವುದಾಗಿದೆ. ಇದಕ್ಕೊಂದು ಸುಂದರ ದೃಷ್ಟಾಂತ :

ಒಮ್ಮೆ ನಾರದಮಹರ್ಷಿಗಳು ಕೃಷ್ಣನ ಬಗ್ಗೆ ಗೋಪಿಯರಿಗೆ ಇರುವ ಸ್ನೇಹವನ್ನು ಪರೀಕ್ಷಿಸಲು ಗೋಕುಲಕ್ಕೆ ಬರುತ್ತಾರೆ. ಕೃಷ್ಣ ಆಗ ದ್ವಾರಕೆಯಲ್ಲಿದ್ದ. ಗೋಪಿಯರು ನಾರದರನ್ನು ಕುರಿತು ತಮ್ಮ ಕೃಷ್ಣನ ಯೋಗಕ್ಷೇಮವನ್ನು ವಿಚಾರಿಸಿದಾಗ ನಾರದರು ಕೃಷ್ಣನಿಗೆ ಸಹಿಸಲಾಗದ ಉದರ ಬೇನೆಯಾಗಿದೆ. ಅದು ಯಾವ ಔಷಧಿಯಿಂದಲೂ ಗುಣವಾಗುತ್ತಿಲ್ಲ. ಆದರೆ ಅವನ ಆತ್ಮೀಯ ಗೆಳೆಯರ ಪಾದಧೂಳಿಯನ್ನು ಅವನ ಹೊಟ್ಟೆಗೆ ಹಚ್ಚಿದರೆ ನೋವು ಶಮನಗೊಳ್ಳುವುದಂತೆ ಎಂದು ಹೇಳಿದಾಗ ಪರಮ ಭಕ್ತರಾದ ಆ ಪ್ರೇಮಮಯಿ ಗೋಪಿಯರಿಗೆ ತಮಗೇ ಉದರ ಶೂಲೆಯಾದಂತೆ ಭಾಸವಾಯಿತು. ಸಂಕಟಗೊಂಡ ಅವರು ಒಡನೆಯೇ ತಮ್ಮ ತಮ್ಮ ಪಾದಧೂಳಿಯನ್ನು ಕೊಡಲು ಮುಂದಾದರು. ಆಗ ನಾರದರು ಅವರನ್ನು ತಡೆಯುತ್ತಾ, ''ಓ ಗೋಪಿಯರೇ, ಪರಮಾತ್ಮನಿಗೆ ನಿಮ್ಮ ಪಾದಧೂಳಿಯನ್ನು ಕೊಡುವಿರಾ ? ಇದರಿಂದ ನೀವು ಸಾವಿರ ಜನ್ಮಗಳು ನರಕಕ್ಕೆ ಹೋಗಬೇಕಾಗುತ್ತದೆ'' ಎನ್ನುತ್ತಾರೆ. ಆಗ ಗೋಪಿಯರು ನಸುನಕ್ಕು, ''ನಾರದರೇ, ನರಕಕ್ಕೆ ಹೆದರುವವರು ನಾವಲ್ಲ. ನಮ್ಮ ಪ್ರಿಯಸಖ ಕೃಷ್ಣನಿಗೆ ಸೌಖ್ಯವಾಗುವುದಾದರೆ ಸಾವಿರವೇಕೆ ಲಕ್ಷಯೋನಿಗಳಲ್ಲೂ ನರಕಕ್ಕೆ ಹೋಗಲು ಸಿದ್ಧರಾಗಿದ್ದೇವೆ. ನರಕದಲ್ಲೂ ನಮ್ಮ ಪರಮಸಖನನ್ನು ಸ್ಮರಿಸುತ್ತಾ ಶಿಕ್ಷೆ ಅನುಭವಿಸುತ್ತೇವೆ '' ಎಂದಾಗ ಗೋಪಿಯರ ಭಕ್ತಿ, ಸ್ನೇಹಗಳಿಗೆ ತಲೆದೂಗುತ್ತಾ, ಪರಮಾತ್ಮನಲ್ಲಿ ಪರಮ ಸ್ನೇಹವೆಂದರೆ ಇದು ಎಂದು ಉದ್ಗರಿಸುತ್ತಾರೆ.

ಇಂತಹ ಗೋಪಿಯರ ಸಖ್ಯಭಕ್ತಿಯನ್ನು ಸಾಕ್ಷಾತ್ ಬ್ರಹ್ಮನೇ,

**ಅಹೋಭಾಗ್ಯಮಹೋಭಾಗ್ಯಂ ನಂದಗೋಪವ್ರಜೌಕಸಾಮ್ ।**
**ಯನ್ಮಿತ್ರಂ ಪರಮಾನಂದಂ ಪೂರ್ಣಂ ಬ್ರಹ್ಮಸನಾತನಮ್ ॥**

*(ಭಾಗವತ, ೧೦.೧೪.೩೨)*

'ಪರಮಾನಂದಸ್ವರೂಪನಾದ, ಪೂರ್ಣಬ್ರಹ್ಮಸನಾತನನಾದ ನೀನು ಯಾರಿಗೆ ಮಿತ್ರನಾಗಿರುವೆಯೋ ಅಂತಹ ಗೋಪಿಯರ ಭಾಗ್ಯವೇ ಭಾಗ್ಯ' ಎಂದು ಕೊಂಡಾಡುತ್ತಾನೆ.

### ರಾಧಾ-ಕೃಷ್ಣರ ಸಖ್ಯ

ಇನ್ನು ರಾಧಾಕೃಷ್ಣರ ಸಖ್ಯ ಸರ್ವಲೋಕವಿದಿತ. ಇದು ಪ್ರಾಪಂಚಿಕವಾದ ಕಾಮಭರಿತ ಪ್ರೇಮವಲ್ಲ. ಪರಮಾತ್ಮನೇ ಸರ್ವಸ್ವ ; ಅವನ ಹೊರತು ಬೇರೇನೂ ಇಲ್ಲ , ಬೇರೇನೂ ಬೇಡವೆಂಬ ನಿಷ್ಕಾಮಪ್ರೇಮ. ರಾಧೆಗೆ ಕೃಷ್ಣನನ್ನು ಬಿಟ್ಟು ಅರೆಗಳಿಗೆ ಇರಲೂ ಸಾಧ್ಯವಾಗುತ್ತಿರಲಿಲ್ಲ.

**ಅಂತರಂಗವು ಇದೇಕೊ ಎಡೆಬಿಡದೆ ತುಡಿಯುತಿದೆ**
**ಹೇಳು ಸಖಿ ಶ್ರೀಕೃಷ್ಣನೆಲ್ಲಿರುವನು ?**
**ಪ್ರಾಣಸಖನಿಲ್ಲದೆ ನಿಲ್ಲದಾಗಿದೆ ಜೀವ**
**ಕರೆದು ತಾರೌ ಸಖಿಯೇ ಕೃಷ್ಣನನ್ನು**

ಎಂದು ಗೋಗರೆಯುತ್ತಾಳೆ. ಇಂತಹ ಭಕ್ತಿ, ಇಂತಹ ತುಡಿತ ನಮ್ಮಿಂದ ಸಾಧ್ಯವೆ ?

ರಾಮಾವತಾರದಲ್ಲಿ ಸುಗ್ರೀವಸಖ್ಯ, ಕೃಷ್ಣಾವತಾರದಲ್ಲಿ ಅರ್ಜುನ, ಸುದಾಮ ಮತ್ತು ಗೋಪಿಯರ ಸಖನಾಗಿ ಸಖ್ಯಭಕ್ತಿಯ ಶ್ರೇಷ್ಠತೆಯನ್ನು ಎತ್ತಿ ತೋರಿದ ಭಗವಂತನೆಂಬ ಪರಮಸಖ. ಭಗವಂತನಲ್ಲಿ ಸ್ನೇಹ ಮಾಡಲು ಹೊರಗಿನ ಜಾತಿ, ಕುಲ, ಆಸ್ತಿಪಾಸ್ತಿ, ಅಂತಸ್ತು ಯಾವುದೂ ಅಡ್ಡಬರುವುದಿಲ್ಲ. ನಿಷ್ಕಪಟ ನಿಷ್ಕಾಮ ಸ್ನೇಹವಿದ್ದರೆ ಸಾಕು. ಇಂತಹ ಸಖನನ್ನು ಎಲ್ಲ ಆಪತ್ತಿನಿಂದಲೂ, ಅವನು ಕೇಳದೆಯೇ ಇದ್ದರೂ, ತಾನೇ ಪಾರುಮಾಡುತ್ತಾನೆ ನಮ್ಮ ಪರಮಮಿತ್ರ ಎನ್ನುತ್ತಾರೆ.

### ಕಲಿಯುಗದಲ್ಲಿ ಸಖ್ಯಭಕ್ತಿ

ಈ ಕಲಿಯುಗದಲ್ಲಿ ಇಂತಹ ಪರಮಸಖ ಪರಮಾತ್ಮನನ್ನು ಪಾಮರರಾದ ನಾವು ಹೇಗೆ ಪ್ರಾರ್ಥಿಸಬೇಕೆಂಬುದನ್ನು ನಾದಯೋಗಿ ತ್ಯಾಗರಾಜಸ್ವಾಮಿಗಳ ಒಂದೆರಡು ಕೀರ್ತನೆಗಳಿಂದ ಕಲಿಯಬಹುದು :

'ಇನ್ನಾಳು ನನ್ನೇಲಿ' ಎಂಬ ಕೀರ್ತನೆಯಲ್ಲಿ ಶ್ರೀರಾಮನನ್ನು ಕುರಿತು, 'ನೀನು ಅಸಮಾನ ಸಂಗಾತಿ ಹಾಗೂ ಕಷ್ಟದಲ್ಲಿ ಒದಗುವ ಮಿತ್ರನೆಂದು ತಿಳಿದಿರುವೆನು. ಆದುದರಿಂದ ನೀನು ನನ್ನ ನಿರಾಸೆಯನ್ನು ಹೋಗಲಾಡಿಸಲು ನಿನ್ನ ದರ್ಶನವಿತ್ತು ನನ್ನನ್ನು ಅನುಗ್ರಹಿಸು' ಎಂದು ಪ್ರಾರ್ಥಿಸುತ್ತಾರೆ. ಇತರ ಕೆಲವು ಕೃತಿಗಳಲ್ಲಿ ದೇವರು ತಮ್ಮ ಸರಿಸಾಟಿಯಿಲ್ಲದ ಜೊತೆಗಾರನೆಂದು ನಂಬಿ ಅವನನ್ನು ವರಮಿತ್ರ ಎಂದು ಕರೆಯುತ್ತಾರೆ. ತನ್ನ ದೈವದೊಂದಿಗೆ ಅತ್ಯಂತ ಸಲಿಗೆಯಿಂದಲೂ, ಸ್ನೇಹದಿಂದಲೂ 'ನನ್ನನ್ನು ರಕ್ಷಿಸಿ ನಿನ್ನ ಕುಲಬಿರುದನ್ನು ಉಳಿಸಿಕೊ'ಎಂದು ಆಜ್ಞಾಪಿಸುತ್ತಾರೆ. ತಮ್ಮ ಪರಮಸಖನೊಂದಿಗೆ ತಿಳಿಹಾಸ್ಯ ತುಂಬಿ ರೇಗಿಸುತ್ತಾರೆ, ಕೋಪಿಸಿಕೊಳ್ಳುತ್ತಾರೆ, ಹಠ ಮಾಡುತ್ತಾರೆ, ಜಗಳವಾಡು

ತ್ತಾರೆ, ಬುದ್ಧಿ ಹೇಳುತ್ತಾರೆ. ಕೊನೆಗೆ ತಾವೇ ಅವನೊಡನೆ ಹೃದಯ ಬಿಚ್ಚಿ ಮಾತನಾಡಿ ರಾಜಿಮಾಡಿಕೊಳ್ಳುತ್ತಾರೆ. ಇಂತಹ ಭಕ್ತ-ಭಗವಂತರ ನಡುವಿನ ಸ್ನೇಹ ಅತ್ಯದ್ಭುತ !

ಕಲಿಯುಗದ ಇನ್ನೊಬ್ಬ ಶ್ರೇಷ್ಠ ಸಂತರಾದ ಸಮರ್ಥ ರಾಮದಾಸರು ತಮ್ಮ 'ದಾಸಬೋಧೆ'ಯಲ್ಲಿ ಪರಮಾತ್ಮನನ್ನು ಪ್ರೇಮ ಮತ್ತು ಸ್ನೇಹದಿಂದ ಬಂಧಿಸಬೇಕು. ಅವನೊಡನೆ ಹೆಚ್ಚಿನ ಸಖ್ಯವನ್ನು ಬೆಳೆಸಬೇಕು. ನಮ್ಮ ಪ್ರತಿಯೊಂದು ವರ್ತನೆಯೂ ಅವನಿಗೆ ಅತ್ಯಂತ ಪ್ರಿಯವಾಗುವಂತಿದ್ದರೆ ಅವನ ಜೊತೆ ಸಖ್ಯವಾಗುವುದು ನಿಶ್ಚಯ. ಅವನ ಸಖ್ಯಕ್ಕಾಗಿ ನಮ್ಮೆಲ್ಲ ಸೌಖ್ಯವನ್ನು ಬಿಟ್ಟುಕೊಡಬೇಕು, ಆಗ ಮಾತ್ರ ಸಾಧ್ಯ ಎಂದು ಹೇಳುತ್ತಾರೆ.

ಶ್ರೀ ಸದಾಶಿವ ಬ್ರಹ್ಮೇಂದ್ರರು, ''ಭಗವಂತ ನನಗೆ ಬಹಳ ಬೇಕಾದವನು. ನಾನು ಅವನಿಗೆ ಸೇರಿದವನು ಅವನೇ ಸರ್ವಸ್ವ ಎಂಬ ಭಾವನೆ ಸಖ್ಯಭಕ್ತಿಯಲ್ಲಿ ಗಾಢವಾಗಿರಬೇಕು. ಮಿತ್ರರಲ್ಲಿ ಕಂಡುಬರುವ ಸಮಾನ ಧರ್ಮವು ಇರಬೇಕು'' ಎನ್ನುತ್ತಾರೆ.

ಇನ್ನು ನಮ್ಮ ದಾಸವರೇಣ್ಯ ಪುರಂದರದಾಸರು ತಮ್ಮ ನವವಿಧ ಭಕ್ತಿಯ ಸುಳಾದಿಯಲ್ಲಿ,

**ಹರಿಯಲ್ಲಿ ಭಕುತಿಯ ಗೆಳೆತನವಿಟ್ಟ**
**ತರುಣಿ ಸಂಪದ ವ್ರಜಗಳ ಸ್ನೇಹ ಬಿಟ್ಟ**
**ಕರ್ಮತ್ರಯಂಗಳನವ ಹಿಂದಕಿಟ್ಟ**
**ತಿರುಗಿ ಬರುವ ಪುರದ ಬಟ್ಟೆಯ ಮೆಟ್ಟ**
**ಪುರಂದರವಿಠಲನಲ್ಲಿ ಚಿತ್ತವಿಟ್ಟ**
**ನರಸಿಂಹನೊಲಿಸಿ ಲಿಂಗಾಂಗವ ಸುಟ್ಟ**

ಎಂದು ಹಾಡುತ್ತಾರೆ.

ಶ್ರೀಮಾತೆ ಶಾರದಾದೇವಿಯವರು ಈ ಗಹನ ವಿಚಾರವನ್ನು ಅತ್ಯಂತ ಸರಳವಾಗಿ ಹೇಳುವ ಪರಿಯನ್ನು ನೋಡೋಣ :

ಶ್ರೀಮಾತೆಯವರು ತಮ್ಮ ಶಿಷ್ಯೆ ಸರಳಾ (ಪ್ರವ್ರಾಜಿಕಾ ಭಾರತೀಪ್ರಾಣಾ) ಜೊತೆಗೆ ಮಾತನಾಡುತ್ತಿದ್ದಾರೆ:

**ಸರಳಾ :** (ಶ್ರೀರಾಮಕೃಷ್ಣರಿಗೆ ಆಹಾರ ನೈವೇದ್ಯಮಾಡಲು ಶ್ರೀಮಾತೆಯವರು ಹೇಳಿದಾಗ) ಅಮ್ಮಾ, ಶ್ರೀರಾಮಕೃಷ್ಣರಿಗೆ ಹೇಗೆ ನೈವೇದ್ಯ ಮಾಡಬೇಕು ಅಂತ ನನಗೆ ಗೊತ್ತಿಲ್ಲವಲ್ಲ, ನೈವೇದ್ಯದ ಮಂತ್ರಗಳು ಗೊತ್ತಿಲ್ಲವಲ್ಲ ?

**ಶ್ರೀಮಾತೆ :** ನೋಡಮ್ಮಾ, ಶ್ರೀರಾಮಕೃಷ್ಣರು ನಿನ್ನವರೆಂದೇ ಭಾವಿಸುತ್ತಾ, 'ಬನ್ನಿ ಕುಳಿತುಕೊಳ್ಳಿ, ಇವನ್ನು ಸ್ವೀಕರಿಸಿ, ಊಟ ಮಾಡಿ' ಎಂದು ಹೇಳು. ಅನಂತರ ಅವರು ಬಂದಿದ್ದಾರೆ, ಕುಳಿತುಕೊಂಡಿದ್ದಾರೆ, ಊಟ ಮಾಡುತ್ತಿದ್ದಾರೆ ಎಂದೇ ಭಾವಿಸಬೇಕು. ನಿನ್ನವರೇ ಆದ ಆತ್ಮೀಯರಿಗೆ ಮಂತ್ರ ಇತ್ಯಾದಿಗಳನ್ನು ಹೇಳಿ ಸತ್ಕರಿಸಬೇಕೇ? ಯಾವ ಭಾವದಿಂದ ಅವರಿಗೆ ಅರ್ಪಿಸುವೆಯೋ ಅದೇ ಭಾವದಿಂದ ಅವರು ಅದನ್ನು ಸ್ವೀಕರಿಸುತ್ತಾರೆ. *(ಶ್ರೀ ಶಾರದಾದೇವಿ ವಚನವೇದ, ಪು. ೫೧೫)*

ಎಂತಹ ಸರಳ ಸುಂದರ ಉಪದೇಶ ! ಯಾವ ಆಡಂಬರವೂ ಇಲ್ಲ. ಭಗವಂತ ನಮ್ಮವನೇ, ನಮ್ಮ ಪರಮಸಖ ಎಂದು ಹೇಳುತ್ತಿದ್ದಾರೆ. ಸ್ನೇಹಭರಿತ ಆತ್ಮೀಯತೆ ಮುಖ್ಯ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದಾರೆ ಶ್ರೀಮಾತೆ!

ಆದ್ದರಿಂದ ನಮ್ಮ ಹಿತವನ್ನು ಬಯಸುವವನೇ ಸ್ನೇಹಿತ. ಸಂಸ್ಕೃತದಲ್ಲಿ ಸ್ನೇಹವೆಂದರೆ ತೈಲ ಎಂಬ ಅರ್ಥವೂ ಇದೆ. ನಮ್ಮ ಬಾಳಿಗೆ ಪ್ರೀತಿ, ವಿಶ್ವಾಸ, ಭರವಸೆಗಳೆಂಬ ತೈಲವನ್ನೆರೆದು ಕೊನೆಯವರೆಗೂ ಬೆಂಬಲವಾಗಿ ನಿಂತು ಜೀವನಜ್ಯೋತಿಯನ್ನು ಬೆಳಗುವ ಈ ದೇವನೇ ನಮ್ಮೆಲ್ಲರ ಪರಮಾಪ್ತ ಸಖ. ಮಿತ್ರನೆಂದರೆ ಅವನು ಪ್ರೀತಿಯ ರಸಾಯನ ಎನ್ನುತ್ತದೆ ಹಿತೋಪದೇಶ. ಸ್ನೇಹವೆಂದರೆ ಕಪಟತನವಿಲ್ಲದಿರುವಿಕೆ. ಇದನ್ನೇ ವಿದುರನೀತಿಯೂ ಹೇಳುತ್ತದೆ:

**ಸರ್ವತೀರ್ಥೇಷು ವಾ ಸ್ನಾನಂ ಸರ್ವಭೂತೇಷು ಚಾರ್ಜವಮ್ ।**
**ಉಭೇ ತ್ವೇತೇ ಸಮೇ ಸ್ಯಾತಾಮಾರ್ಜವಂ ವಾ ವಿಶಿಷ್ಯತೇ ॥**

*(ಮಹಾಭಾರತ, ಉದ್ಯೋಗ ಪರ್ವ, ಅಧ್ಯಾಯ ೩, ಶ್ಲೋಕ ೨)*

ಎಂದರೆ ಪ್ರಪಂಚದ ಸರ್ವ ಪುಣ್ಯತೀರ್ಥಗಳಲ್ಲಿಯೂ ಸ್ನಾನ ಮಾಡುವುದು ಮತ್ತು ಪ್ರಪಂಚದ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ನಿಷ್ಕಪಟ ಸ್ನೇಹದಿಂದಿರುವುದು ಈ ಎರಡು ಕಾರ್ಯಗಳೂ ಒಂದೇ ವಿಧವಾದ ಫಲವನ್ನು ನೀಡುತ್ತವೆ. ಆದರೆ ನಿಷ್ಕಾಪಟ್ಯದಿಂದ ಕೂಡಿದ ಸ್ನೇಹವೇ ಹೆಚ್ಚು ಮಹತ್ವಪೂರ್ಣ.

ಹೀಗೆ ಸ್ನೇಹಕ್ಕೆ ಅತ್ಯಂತ ಮಹತ್ವವಿದೆ. ಇನ್ನು ಪರಮಾತ್ಮನೇ ನಮ್ಮ ಸ್ನೇಹಿತನಾದಾಗ ಕೇಳಬೇಕೆ? ಈ ಸ್ನೇಹಿತ ನಮ್ಮ ಸುಖದ ದಿನಗಳಲ್ಲಿ ತಾನೂ ಸಂತಸಪಡುತ್ತಾನೆ, ಕಷ್ಟದ ದಿನಗಳಲ್ಲಿ ತನ್ನ ಸಹಾಯ ಹಸ್ತವನ್ನು ನೀಡುತ್ತಾನೆ. ನಮ್ಮಿಂದ ಪ್ರತಿಫಲವನ್ನು ನಿರೀಕ್ಷಿಸದ ಪ್ರೇಮದ ಸಿಂಧು ಅವನು. ಯಾವುದು ನಮಗೆ ಹಿತ ಎಂಬುದನ್ನು ಬಲ್ಲ , ಈ ನಮ್ಮ ಸ್ನೇಹಿತ. ಅದನ್ನು ಮಾತ್ರ ವರವಾಗಿ ಕರುಣಿಸುತ್ತಾನೆ. ಇಂತಹ ಸ್ನೇಹಿತನ ನಾಮ ಗುಣ ರೂಪ ಲೀಲೆಗಳನ್ನು ನೆನೆಯುತ್ತಾ ಪರಮ ಸಂತೋಷಪಡುವುದು, ಅವನ ದರ್ಶನ ಸಾನ್ನಿಧ್ಯಕ್ಕಾಗಿ ಹಾತೊರೆಯುವುದು ಅವನ ವಿಯೋಗದಲ್ಲಿ ವ್ಯಾಕುಲನಾಗುವುದು ಇವೆಲ್ಲವೂ ಸಖ್ಯಭಕ್ತಿಯ ಲಕ್ಷಣಗಳು.

ರಾಮಾವತಾರದಲ್ಲಿ ಸುಗ್ರೀವನ ಪರಮಸಖನಾಗಿ, ಕೃಷ್ಣಾವತಾರದಲ್ಲಿ ಅರ್ಜುನ, ಗೋಪಿಯರು, ಸುದಾಮ, ರಾಧೆಯರ ಆಪ್ತಮಿತ್ರನಾಗಿ ಬೆಳಗಿದ ಆ ಪರಂಜ್ಯೋತಿಯು ನಮ್ಮೆಲ್ಲರ ಪರಮಾಪ್ತಸಖನಾಗಿ ಅಸತ್ಯದಿಂದ ಸತ್ಯದೆಡೆಗೂ, ಕತ್ತಲೆಯಿಂದ ಬೆಳಕಿನೆಡೆಗೂ, ಮೃತ್ಯುವಿನಿಂದ ಅಮೃತತ್ವದೆಡೆಗೂ ಕೈಹಿಡಿದು ಕರದೊಯ್ಯಲೆಂದು ಸ್ನೇಹಭಕ್ತಿಯಿಂದ ಪ್ರಾರ್ಥಿಸೋಣ. ✤